## ಝುಣ ಝುಣ ಕಾಂಚಾಣ

ಡಿ.ಎಸ್. ಚೌಗಲೆ ಇವರ 'ಝುಣ ಝುಣ ಕಾಂಚಾಣ' (ನ. 19ರ ಸಂಚಿಕೆ) ಕಥೆಯಲ್ಲಿ ಸಹಕಾರ ಸಂಘಗಳ ನೆಪದಲ್ಲಿ ಕಪ್ಪುಹಣವನ್ನು ಸಾರ್ವತ್ರಿಕಗೊಳಿಸಿಕೊಂಡು ರೈತರಿಗೆ ವಂಚಿಸುವ ಪುಡಿ ರಾಜಕಾರಣಿಗಳ ಒಳಮುಖವನ್ನು ತೆರೆದಿಟ್ಟಿದ್ದಾರೆ. ಬಡ್ಡಿಕುಳ ಭೀಮನಗೌಡನ ಹಣದ ದಾಹ, ವಕೀಲ ಅಶೋಕನ ಮಾನವೀಯತೆ, ಗಡಿಭಾಗದ ಜನರ ಜೀವನದ ರೀತಿ ರಿವಾಜುಗಳನ್ನು ತಮ್ಮದೇ ಆದ ಮರಾಠಿ ಮಿಶ್ರಿತ ಕನ್ನಡ ಶೈಲಿಯಲ್ಲಿ ಬರೆದಿರುವ ರೀತಿ ವಿಶಿಷ್ಟವಾಗಿದೆ.

—ಅಕ್ಕಿಹೆಬ್ಬಾಳು ನಾಗರಾಜ್ ಮೈಸೂರು
ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಪುಟಾಣಿ ಪ್ಲಾಂಟ್ ಟೀಚರ್

ನ.19ರ ಸಂಚಿಕೆಯಲ್ಲಿ ಪದ್ಮನಾಭ ಭಟ್ ಅವರು ಬರೆದಿರುವ 'ಪುಟಾಣಿ ಪ್ಲಾಂಟ್ ಟೀಚರ್' ಲೇಖನ ಆಸಕ್ತಿದಾಯಕವಾಗಿತ್ತು. ಅಮೆರಿಕದ ವಾಷಿಂಗ್ಟನ್ ಸ್ಟೇಟ್ ಯೂನಿವರ್ಸಿಟಿಯಲ್ಲಿ ತೋಟಗಾರಿಕೆ ವಿಭಾಗದಲ್ಲಿ ಉಪನ್ಯಾಸಕನಾಗಿರುವ ನನಗೆ ಈ ಪುಟಾಣಿಯ ಸಸ್ಯಪ್ರೀತಿ ಕಂಡು ಖುಷಿಯಾಯಿತು. ಲೇಖಕರು ಮತ್ತು ಆ ಪುಟಾಣಿ ಇಬ್ಬರಿಗೂ ನನ್ನ ಅಭಿನಂದನೆಗಳು.

—ಜಿ.ಎನ್.ಎಂ. ಕುಮಾರ್, ವಾಷಿಂಗ್ಟನ್

ಫ್ರಿನ್‌ಷಾಳ ಆಸಕ್ತಿಯನ್ನು ಗುರ್ತಿಸಿ ಪ್ರೋತ್ಸಾಹಿಸಿದ ಅವಳ ಅಜ್ಜಿಯನ್ನು ನಾನು ಅಭಿನಂದಿಸುತ್ತೇನೆ. ಆದರೆ ಈ ಲೇಖನದ ಜೊತೆಗೆ ಪ್ರಕಟಿಸಿರುವ ಫ್ರಿನ್‌ಷಾ ವೃತ್ತಪತ್ರಿಕೆಯ ಬಟ್ಟೆ ತೊಟ್ಟಿರುವ ಚಿತ್ರ ಅಪ್ರಸ್ತುತವಾಗಿದೆ. ಅದರ ಬದಲಿಗೆ ಅವಳು ಬೆಳೆಸಿದ ಗಿಡಗಳದ್ದೇ ಫೋಟೊ ಪ್ರಕಟಿಸಬಹುದಿತ್ತು.

—ಇಂದಿರಾ ಜೆ. ಪ್ರಸಾದ್

ಮುದ್ದು ಹುಡುಗಿಗೆ ಇರುವ ಅಷ್ಟೊಂದು ಆಸಕ್ತಿ ಹಾಗೂ ತಿಳಿವಳಿಕೆ ಶ್ಲಾಘನೀಯ. ಇದು ಈಗಿನ ಮಕ್ಕಳಲ್ಲಿ ಬಹಳ ಅಪರೂಪ. ಬೇರೆ ಮಕ್ಕಳಿಗೂ ಪ್ರೇರಣೆ ಆದರೆ ಅದೊಂದು ಸಾಧನೆ.

—ನವೀನ್ ಚೇಕಲ್, ಬೆಂಗಳೂರು

## ಓದಿನ ಸಂಭ್ರಮ; ಕನ್ನಡ ಘಮ

ಪುರುಷೋತ್ತಮ ಬಿಳಿಮಲೆ ಅವರು ಬರೆದ 'ಕಳೆದು ಹೋಗುತ್ತಿದೆಯೆ ಓದಿನ ಸಂಭ್ರಮ; ಕನ್ನಡ ಘಮ?' ಲೇಖನ (ನ.19) ಚೆನ್ನಾಗಿತ್ತು. ನಮ್ಮ ಛಲದಂಕಮಲ್ಲರು, ಕನ್ನಡ ಕಟ್ಟಾಳುಗಳು, ಅದರಲ್ಲೂ ಮುಖ್ಯವಾಗಿ ಆಡಳಿತ ಚುಕ್ಕಾಣಿ ಹಿಡಿದಿರುವ ಮಂತ್ರಿಮಹೋದಯರು, ಅಧಿಕಾರಿಗಳು ಈ ಲೇಖನವನ್ನು ಓದಲೇಬೇಕು. ಓದಿ ಅರ್ಥೈಸಿಕೊಳ್ಳಬೇಕು. ಆಗ ಕನ್ನಡದ ಪರಿಸ್ಥಿತಿ ಇನ್ನಷ್ಟು ಸುಧಾರಿಸೀತು.

—ಎಂ. ನರಸಿಂಹ, ಬೆಂಗಳೂರು
ಶಂಕರೇಗೌಡ ತುಂಬಕೆರೆ, ಮಂಡ್ಯ

ಕನ್ನಡಿಗರೆಲ್ಲರಲ್ಲಿ ವಿವೇಚನೆ ಮೂಡುವಂತೆ ಮಾಡಿದ ಅದ್ಭುತ ಲೇಖನ. ಕೊನೆಯ ಹನ್ನೆರಡು ಪದಗಳು ನಮ್ಮೆಲ್ಲರಿಗೂ ಅನ್ವಯವಾಗಲೇಬೇಕು.

—ಪ್ರಭಾ ನಾಗರಾಜ್, ಬೆಂಗಳೂರು

ಆತ್ಮೀಯ ಗೆಳತಿ 'ಸುಧಾ'ಳಿಗೆ, ಅವಳ ಬಳಗಕ್ಕೆ ಕನ್ನಡ ರಾಜ್ಯೋತ್ಸವದ ಶುಭಾಶಯಗಳು. ಪುರುಷೋತ್ತಮ ಬಿಳಿಮಲೆಯವರು ಕನ್ನಡನಾಡಿನ ಘನತೆ ಬಗ್ಗೆ ವಿವರವಾಗಿ ತಿಳಿಸಿದ್ದಾರೆ. ಇಂತಹ ವೈಚಾರಿಕ ಲೇಖನ ಇನ್ನಷ್ಟು ವಿಸ್ತೃತವಾಗಿರಬಹುದಾಗಿತ್ತು. ಕನ್ನಡ ಲಿಪಿಯ ಒಂದಿಷ್ಟು ವಿವರಗಳು ಬೇಕಿತ್ತು ಅನಿಸಿತು.

—ಕಮಲಾದೇವಿ ಆರ್. ಎಚ್.
ಎನ್. ರಾಘವನ್, ಬೆಂಗಳೂರು
—ದ್ವಾರನಹಳ್ಳಿ ನಾಗರಾಜ ಆಚಾರ್, ಮೈಸೂರು

ಲೇಖನದ ಕೊನೆಯಲ್ಲಿ ಲೇಖಕರು ವ್ಯಕ್ತಪಡಿಸಿರುವ ವಿಷಾದ ವಾಸ್ತವವೇ. ಕಿರಿಯ ತಲೆಮಾರು ಕನ್ನಡದ ಓದಿನ ಸಂಭ್ರಮದಿಂದ ವಂಚಿತರಾಗಿದ್ದಾರೆ. ಹಾಗೆ ಕನ್ನಡತನದಿಂದಲೂ ದೂರವಾಗುತ್ತಿದ್ದಾರೆ.

—ರೋಹಿಣಿ ಸುಬ್ಬರಾವ್

## ನೆಕ್ಲೇಸ್ ಶತಕ ಸಂಭ್ರಮ

'ಪ್ರವಾಸ' ಅಂಕಣದಲ್ಲಿ ಶ್ರೀನಿವಾಸ ಜೋಕಟ್ಟೆ ಅವರ 'ನೆಕ್ಲೇಸ್ ಶತಕ ಸಂಭ್ರಮ', ಮುಂಬೈನ ಮರೀನ್ ಡ್ರೈವ್ ಬಗೆಗಿನ ಲೇಖನ ತುಂಬಾ ಚೆನ್ನಾಗಿತ್ತು. 'ಅಮ್ಚಿ ಮುಂಬೈ' ಎಂದು ಅಲ್ಲಿನವರಿಂದ ಕರೆಯಿಸಿಕೊಳ್ಳುವ ಮುಂಬೈನ ಪ್ರಸಿದ್ಧ ತಾಣದ ಪರಿಚಯ ಮಾಹಿತಿಪೂರ್ಣವಾಗಿ ಮೂಡಿಬಂತು. ಹಾಗೆಯೇ ಮರೀನ್ ಡ್ರೈವ್‌ನ ನೆಕ್ಲೇಸ್ ಮಾದರಿಯ ಚಿತ್ರ ಕೂಡ ಸುಂದರವಾಗಿತ್ತು.

—ವೀಣಾ ಮಂಜಪ್ಪ, ಬೆಂಗಳೂರು

ನಾಟಕಕ್ಕಾಗಿ ಎಷ್ಟೋ ಬಾರಿ ಮುಂಬೈಗೆ ಹೋಗಿದ್ದೆ; ಅದೇ ರಸ್ತೆಯಲ್ಲಿ ವಾಹನದಲ್ಲಿ ಸಂಚರಿಸಿದ್ದೆ. ಆದರೆ ಆ ಜಾಗದಲ್ಲಿ ಓಡಾಡುತ್ತಾ ಕಾಲ ಕಳೆಯಲು ಸಾಧ್ಯವಾಗಲೇ ಇಲ್ಲ. ಈಗಲೂ ಈ ಇಳಿವಯಸ್ಸಿನಲ್ಲಿ ಅಲ್ಲಿ ಹೋಗಿ ಅಡ್ಡಾಡಬೇಕೆಂಬ ಆಸೆ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಮರಳಿ ಮಡಿಲು; ಯಾಕೋ ದಿಗಿಲು

ನವೆಂಬರ್ 19ರ ಸಂಚಿಕೆಯಲ್ಲಿ ರಾಜಲಕ್ಷ್ಮಿ ಕೋಡಿಬೆಟ್ಟು ಬರೆದ 'ಮರಳಿ ಮಡಿಲು; ಯಾಕೋ ದಿಗಿಲು', ಲೇಖನ ಮಕ್ಕಳ ದಿನದ ಸಂದರ್ಭದಲ್ಲಿ ಸಕಾಲಿಕವಾಗಿತ್ತು. ಮಕ್ಕಳ ಜೀವನದಲ್ಲಿ ಶಾಲೆಗಳ ಮಹತ್ವ ಏನು ಎಂದು ಕೊರೊನಾ ಎಲ್ಲರಿಗೂ ಮನವರಿಕೆ ಮಾಡಿಕೊಟ್ಟಿದೆ. ಅಂಕಗಳ ಬೆನ್ನತ್ತುವ ಈ ವಿದ್ಯಾಭ್ಯಾಸ ವ್ಯವಸ್ಥೆಯನ್ನು ಬದಲಾಯಿಸುವುದಕ್ಕೆ ಒಂದು ಮಾರ್ಗವನ್ನು ಈ ಲಾಕ್‌ಡೌನ್ ತೋರಿಸಿಕೊಡಬಹುದೇನೋ ಎಂದು ಎನಿಸುತ್ತದೆ.

—ಮಾಧವ ಉದ್ಯಾವರ, ಮೈಸೂರು

## ವೈದ್ಯಕೀಯ ಸಾಹಿತ್ಯವನ್ನು ನಿರ್ಲಕ್ಷಿಸಿಲ್ಲ

'ಕನ್ನಡ ಜಗತ್ತು ಮತ್ತು ವಿಜ್ಞಾನ ಜಗತ್ತು' (ನ. 12) ಲೇಖನ ಕುರಿತಂತೆ ಹಿರಿಯ ಸಾಹಿತಿಗಳಾದ ಡಾ. ಸಿ.ಆರ್. ಚಂದ್ರಶೇಖರ್ ಮತ್ತು ಡಾ. ನಾ. ಸೋಮೇಶ್ವರ ಅವರ ಪ್ರತಿಕ್ರಿಯೆ ಕುರಿತಂತೆ ಸ್ಪಷ್ಟನೆ ಕೊಡಲು ಬಯಸುತ್ತೇನೆ.

ಮೊದಲನೆಯದಾಗಿ ನಾ. ಸೋಮೇಶ್ವರ ಅವರು ವಿಜ್ಞಾನ ಸಾಹಿತ್ಯದ ಅವಲೋಕನದಲ್ಲಿ ವೈದ್ಯವಿಜ್ಞಾನವನ್ನು ಪರಿಗಣಿಸಿಲ್ಲ ಎಂದು ಭಾವಿಸಿ, ಆ ಕುರಿತು ವೈದ್ಯಸಾಹಿತ್ಯಕ್ಕೆ ದುಡಿದವರ ಒಂದು ಪಟ್ಟಿಯನ್ನೇ ಕೊಟ್ಟಿದ್ದಾರೆ. ಹಾಗೆಯೇ ಡಾ. ಚಂದ್ರಶೇಖರ್ ಅವರು, ವಿಜ್ಞಾನ ಜಗತ್ತಿನಲ್ಲಿ ವೈದ್ಯವಿಜ್ಞಾನವೂ ಸೇರಿದೆ ಎಂಬುದನ್ನು ಸೂಚಿಸಿದ್ದಾರೆ. ವೈದ್ಯವಿಜ್ಞಾನ, ವಿಜ್ಞಾನ ಜಗತ್ತಲ್ಲೇ ಪ್ರಮುಖ ಸ್ಥಾನ ಪಡೆದಿದೆ ನಿಜ. ಈಗಲೂ ವಿಪುಲ ಸಾಹಿತ್ಯ ಸೃಷ್ಟಿಯಾಗುತ್ತಿದೆ. ನನ್ನ ಲೇಖನದ ಉದ್ದೇಶ ಸಮೀಕ್ಷೆ ಮಾಡುವುದೂ ಅಲ್ಲ, ವ್ಯಕ್ತಿಗತ ಕೊಡುಗೆಗಳನ್ನು ಪಟ್ಟಿ ಮಾಡುವುದೂ ಆಗಿರಲಿಲ್ಲ. ನನ್ನ ಗುರಿ ಇದ್ದದ್ದು ವಿಜ್ಞಾನ ಸಾಹಿತ್ಯಕ್ಕೆ ಮೂಲಭೂತ ಕೊಡುಗೆ ಕೊಟ್ಟ ಸಂದರ್ಭವನ್ನು ಸ್ಮರಿಸುವುದು ಅಷ್ಟೇ ಆಗಿತ್ತು. ಇದನ್ನು ಕನ್ನಡ ವಿಜ್ಞಾನ ಸಾಹಿತ್ಯದ ಬೀಸುನೋಟ ಎಂದಷ್ಟೇ ಪರಿಗಣಿಸಬೇಕು. ಪದಮಿತಿಯನ್ನು ಗಮನಿಸಿ ಕೆಲವು ಮುಖ್ಯ ಸಂಗತಿಗಳನ್ನಷ್ಟೇ ಹ್ರಸ್ವವಾಗಿ ಪ್ರಸ್ತಾಪಿಸಿದೆ.

ಈ ಸಂದರ್ಭದಲ್ಲಿ ಇನ್ನೊಂದು ಸಂಗತಿಯನ್ನು ಇಲ್ಲಿ ಉಲ್ಲೇಖಿಸಬೇಕು. ಕನ್ನಡ ಸಾಹಿತ್ಯ ಪರಿಷತ್ತು, ತನ್ನ ಶತಮಾನೋತ್ಸವದ ಯೋಜನೆಯ ಅಂಗವಾಗಿ (2015) 14 ಸಂಪುಟಗಳಲ್ಲಿ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯನ್ನು ಪ್ರಕಟಿಸುವ ಯೋಜನೆಯಲ್ಲಿ, ವಿಜ್ಞಾನ ತಂತ್ರಜ್ಞಾನ ಸಂಪುಟ ಹೊರಬಂದಿದೆ (ಸಂ. ಟಿ.ಆರ್. ಅನಂತರಾಮು). ಇದರಲ್ಲಿ ಕನ್ನಡ ವಿಜ್ಞಾನ ಸಾಹಿತ್ಯ ಬೆಳೆದ ಪರಿಯನ್ನು 30 ಲೇಖನಗಳಲ್ಲಿ ಸುಮಾರು 700 ಪುಟಗಳಲ್ಲಿ ವಿಸ್ತೃತವಾಗಿ ವಿವರಿಸಿದೆ. ಸಿ.ಆರ್. ಚಂದ್ರಶೇಖರ್, ನಾಗಲೋಟಿಮಠ, ನಾ. ಸೋಮೇಶ್ವರ, ಪಿ. ಎಸ್. ಶಂಕರ್ ಮುಂತಾದ ಸಾಧಕರ ಕೊಡುಗೆಯನ್ನು ಸ್ಮರಿಸಿ ಡಾ. ನಾ. ಸೋಮೇಶ್ವರ ಮತ್ತು ಡಾ. ವಸುಂಧರಾ ಭೂಪತಿಯವರು ವಿಶದವಾಗಿ ಬರೆದಿದ್ದಾರೆ. ಇದರ ಜೊತೆಗೆ ತಾಂತ್ರಿಕ ಸಾಹಿತ್ಯ, ಮಾಹಿತಿ ತಂತ್ರಜ್ಞಾನ, ಪರಿಸರ ಸಾಹಿತ್ಯವನ್ನೂ ಕುರಿತಂತೆ ಒಳನೋಟ ನೀಡುವ ಮೌಲಿಕ ಲೇಖನಗಳು ಈ ಸಂಪುಟದಲ್ಲಿ ಇವೆ.

—ಟಿ.ಆರ್. ಅನಂತರಾಮು, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in